



# ಯುಗಾದಿ ನೆಪದಲ್ಲಿ ‘ಕನ್ನಡ ಸಂಭ್ರಮ’

## ಸಹೃದಯರ ಸ್ಪಂದನ

ಯುಗಾದಿ ಅಥವಾ ದೀಪಾವಳಿ ವಿಶೇಷಾಂಕಗಳು ಅಂದರೆ ಬರೀ ಜಾಹಿರಾತುಗಳಿಂದ ಕೂಡಿದ, ವ್ಯವಹಾರ ನಿಮಿತ್ತ ರೂಪುಗೊಂಡ ಸಂಚಿಕೆಗಳು ಎನ್ನುವ ಭಾವನೆ, ಇತ್ತೀಚಿನ ವರ್ಷಗಳ ವಾರ್ಷಿಕ ಸಂಚಿಕೆಗಳ ಹಿನ್ನೆಲೆಯಲ್ಲಿ ಕಣ್ಣಮುಂದೆ ಬರುತ್ತದೆ. ಇಂಥ ಭಾವನೆಗೆ ಈ ಸಲದ ‘ಸುಧಾ ಯುಗಾದಿ ವಿಶೇಷಾಂಕ’ ಹೊರತಾದುದು. ವಿಶೇಷ ಸಂಚಿಕೆಯೊಂದು ಹೀಗೆಯೇ ಇರಬೇಕು ಎನ್ನುವ ಸಿದ್ಧಸೂತ್ರಗಳನ್ನು ಪ್ರಸಕ್ತ ಸಂಚಿಕೆ ಸುಳ್ಳು ಮಾಡಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ವಿಶೇಷಾಂಕಗಳೆಂದರೆ ಬರೀ ಕಥೆ, ಕವನಗಳ ಸಂಕಲನವಲ್ಲ. ಸಾಹಿತ್ಯದ ಜೊತೆಗೆ ಸಿನಿಮಾ, ಕೃಷಿ, ರಾಜಕೀಯ ಸೇರಿದಂತೆ ವರ್ತಮಾನದ ಆಗುಹೋಗುಗಳನ್ನು ಇಂಥ ವಿಶೇಷ ಸಂಚಿಕೆಗಳು ಗುರ್ತಿಸಬೇಕು. ಈ ಸಮಕಾಲೀನ ಸವಾಲನ್ನು ನಿಭಾಯಿಸಿದಾಗ ವಿಶೇಷಾಂಕಗಳು ವಿಶೇಷ ಅನಿಸುತ್ತವೆ. ಸುಧಾ ಯುಗಾದಿ ಸಂಚಿಕೆ ವಿಶೇಷ ಅನ್ನಿಸುವುದು ಕನ್ನಡದ ನಿನ್ನೆ, ಇಂದು ಮತ್ತು ನಾಳೆಗಳ ಬಗ್ಗೆ ಓದುಗರನ್ನು ಯೋಚನೆಗೆ ಹಚ್ಚುವ ಮೂಲಕ. ಆ ಬರಹಗಳನ್ನು ಓದಿಯೇ ಸವಿಯಬೇಕು.

ನನಗೆ ಸಂಚಿಕೆಯಲ್ಲಿ ಮೊದಲ ನೋಟಕ್ಕೆ ವಿಶೇಷ ಅನಿಸಿದ್ದು ‘ಸೆಲೆಬ್ರಿಟಿ ಸಣ್ಣಕತೆ’. ಸಿನಿಮಾ ನಟಿಯರು, ತಂತ್ರಜ್ಞರು ಅಂದರೆ ಥಳುಕು ಬಳಕು ಅನ್ನುವ ನಮ್ಮ ಕಲ್ಪನೆಯನ್ನು ಮೇಘನಾ ಗಾಂವ್ಕರ್ ಅವರ ‘ಆ ಒಂದು ನಗು’ ಹಾಗೂ ರಂಜನಿ ರಾಘವನ್ ಅವರ ‘ಆ್ಯಪ್ ಉಚಿತ ಸಂಗಾತಿ ಖಚಿತ’ ಕಥೆಗಳು ಬದಲಿಸುತ್ತವೆ ಹಾಗೂ ಓದುಗರನ್ನು ದಂಗು ಬಡಿಸುತ್ತವೆ. ಡಿ. ಸತ್ಯಪ್ರಕಾಶ್ ಮತ್ತು ಯೋಗರಾಜ ಭಟ್ ಅವರು ಕೆಲವೇ ಪದಗಳಲ್ಲಿ ತುಂಬಾ ಮಾರ್ಮಿಕವಾಗಿ ಕಥೆಗಳನ್ನು ಕಟ್ಟಿಕೊಟ್ಟಿರುವುದು ಖುಷಿಕೊಟ್ಟಿತು. ಬಹುಮಾನಿತ ಪ್ರಬಂಧಗಳಲ್ಲಿ ‘ಲೋಕಲ್ ಲಾರಿ...’ ಮೊದಲ ಬಹುಮಾನಿತ ಪ್ರಬಂಧ ತನ್ನ ನವಿರಾದ ನಿರೂಪಣೆಯ ಜೊತೆಗೆ, ಬಾಲ್ಯದ ದಟ್ಟ ನೆನಪುಗಳ ಮೂಲಕ ಆಪ್ತವೆನ್ನಿಸಿತು. ಅಜ್ಜನ ಮಾಂಸದೂಟ ಮತ್ತು ಅವನ ಲಾರಿಯ ಮೇಲಿನ ವ್ಯಾಮೋಹ, ಉಮ್ಮ ನೆನಪುಗಳು ಓದಿದ ಮೇಲೆ ‘ವಾಹ್’ ಎನ್ನುವ ಉದ್ಗಾರ ಹೊರಟಿತು.

ಆರಿಫ್ ರಾಜಾ ಅವರ ‘ಈ ಬುವಿಗೆ ಯಾವಾಗಲೂ ಅರ್ಧ ಬೆಳದಿಂಗಳು’ ಕವಿತೆ ಇಷ್ಟವಾಯಿತು. ಅಮರೇಶ ಗಿಣಿವಾರರ ‘ದಾಟುಬಕ್ಕೆ’ ಕತೆ ತನ್ನ ಗ್ರಾಮೀಣ ಜವಾರಿ ಭಾಷೆಯಲ್ಲಿ ನಮ್ಮನ್ನು ದಂಗುಬಡಿಸುತ್ತದೆ.

ಹಲವು ವಿಶೇಷಗಳಿಂದ ಕೂಡಿರುವ ಈ ಸಲದ ವಿಶೇಷಾಂಕ ತನ್ನ ವಸ್ತು ವಿಷಯ ವಿನ್ಯಾಸದೊಂದಿಗೆ ಕಲಾತ್ಮಕವಾಗಿ ಮೂಡಿಬಂದಿದೆ; ಯುಗಾದಿನ್ನು ಸ್ವಾಗತಿಸುವ ತಳಿರು ತೋರಣವಾಗಿ, ಹಬ್ಬದ ಅರ್ಥಸಾಧ್ಯತೆಗಳನ್ನು ಹೆಚ್ಚಿಸುವ ಸಿಹಿಹೂರಣವಾಗಿ ರೂಪುಗೊಂಡಿದೆ.

**—ಮುದಿರಾಜ್ ಬಾಣದ್, ರಾಯಚೂರು**